ಶ್ರೀ ಭಾವುರಾವ್ ದೇಶಪಾಂಡೆ.—ಮಾನ್ಯ ಅಧ್ಯಕ್ಷರೇ, ಆ ಔಷಧಿಗಳ ಬೆಲೆ ಎಷ್ಟು ಎನ್ನುವ ವಿಚಾರಕ್ಕೆ ನಾನು ಹೋಗುವುದಿಲ್ಲ. ಆದರೆ ಸುಮಾರು ೫೦ ಜನ ನಾಗರೀಕರು ಪೋಲೀಸ್ ಅಧಿಕಾರಿಗಳಿಗೆ ಕೆಟ್ಟಂಥ ಹೇಳಿಕೆಯ ಮೇರೆಗೆ ಅವರು ಔಷಧ ತುಂಬಿದ ಳ ಪೆಟ್ಟಿಗೆಗಳನ್ನು ವಶಪಡಿಸಿಕೊಂಡಿದ್ದಾರೆ ಎಂದು ಉಲ್ಲೇಖ ಇದೆ. ಅದರ ಜೊತೆಗೆ ಆಸ್ಪತ್ರೆಯ ನರ್ಸ್‌ಗಳು ಮತ್ತು ಇತರ ಸಿಬ್ಬಂದಿಯವರು ಪೋಲೀಸರಿಗೆ ಇದರ ಬಗ್ಗೆ ಹೇಳಿಕೆ ಕೊಟ್ಟಿದ್ದಾರೆ. ಅದರ ವಿವರಣೆಯೂ ಇದೆ. ಇಷ್ಟೆಲ್ಲಾ ಆದನಂತರ ಆ ವೈದ್ಯಾಧಿಕಾರಿಯನ್ನು ಅದೇ ಸ್ಥಳದಲ್ಲಿ ಇಟ್ಟರೆ ಜನಗಳಲ್ಲಿ ಅವರ ಬಗ್ಗೆ ನಂಬಿಕೆ ಇರುತ್ತದೆಯೇ ಹೇಗೆ ? ಅವರ ಬಗ್ಗೆ ಪೋಲೀಸರ ವರದಿ ಬರುವುದು ತುಂಬಾ ತಡವಾದರೆ ವೈದ್ಯಾಧಿಕಾರಿಗಳನ್ನು ಅಲ್ಲಿ ಮುಂದುವರಿಸತಕ್ಕಂಥಾದ್ದು ಇದೆಯೇ ಅಥವಾ ತಮ್ಮ ಇಲಖೆಯವರಿಗೆ ಈ ಒಂದು ಅವಧಿಯಲ್ಲಿ ಅವರ ಮೇಲೆ ಕ್ರಮ ತೆಗೆದುಕೊಳ್ಳತಕ್ಕಂಥ ಮನಸ್ಸು ಇದೆಯೇ ?

ಶ್ರೀ ಎಂ. ಮಲ್ಲಪ್ಪ.—ಸ್ವಾಮಿ, ಈ ಬಗ್ಗೆ ಪೋಲೀಸರು ಸಮೀಕ್ಷೆ ನಡೆಸುತ್ತಿದ್ದಾರೆ. ಈ ಬಗ್ಗೆ ಕಂಪ್ಲೈಂಟ್ ೧೪-೬-೧೯೭೮ ರಲ್ಲಿ ಬಂದಿದೆ. ಅವರನ್ನು ಆ ಜಾಗದಲ್ಲಿ ಮುಂದುವರಿಸಬೇಕೆನ್ನುವ ಇಚ್ಛೆ ಸರ್ಕಾರಕ್ಕೆ ಇಲ್ಲ. ಈಗ ಸದ್ಯಕ್ಕೆ ಅವರಿಂದ ಫೈನಲ್ ರಿಪೋರ್ಟ್ ಬರಲಿ, ನಡೆಯುತ್ತಿರತಕ್ಕಂಥ ತನಿಖೆ ಪೂರ್ತಿಯಾಗಲಿ ಎನ್ನುವುದು ಸರ್ಕಾರದ ಉದ್ದೇಶವಾಗಿದೆ.

ಶ್ರೀ ಮಳ್ಳೂರ್ ಆನಂದರಾವ್.—ಮಾನ್ಯ ಅಧ್ಯಕ್ಷರೇ, ನಾನು ಒಂದು ಪ್ರಶ್ನೆ ಕೇಳುವುದಕ್ಕೆ ತಾವು ಅವಕಾಶ ಕೊಡಿ. ಈ ವಿಚಾರದಲ್ಲಿ ಡಾಕ್ಟರ್ ವೀಣಾರವರು ಆಸ್ಪತ್ರೆಯ ಔಷಧಗಳನ್ನು ತಮ್ಮ ಮನೆಯಲ್ಲಿ ಅಕ್ರಮವಾಗಿ ಇಟ್ಟುಕೊಂಡಿದ್ದಾರೆ. ಅದನ್ನು ದುರುಪಯೋಗ ಮಾಡಿದ್ದಾರೆ ಎಂದು ತಿಳಿದು ಬಂದಾಗ ಪೋಲೀಸರು ಅವರ ಮೇಲೆ ಕೇಸ್ ರಿಜಿಸ್ಟರ್ ಮಾಡಿದ್ದಾರೆಯೇ ? ಇದು ಮೊದಲನೇ ಪ್ರಶ್ನೆ. ಇನ್ನು ಎರಡನೇ ಪ್ರಶ್ನೆ ಎಂದರೆ ಅದೇ ಆಸ್ಪತ್ರೆಯಲ್ಲಿ ಕೆಲಸ ಮಾಡುತ್ತಿದ್ದಂಥ ಇನ್ನೊಬ್ಬ ನೌಕರ ಅವರು ಔಷಧಗಳನ್ನು ದುರುಪಯೋಗ ಮಾಡುತ್ತಿದ್ದಾರೆ ಎಂದು ಇದರ ಬಗ್ಗೆ ಸುಳಿವು ಕೊಟ್ಟಾಗ ಆ ವ್ಯಕ್ತಿಯನ್ನು ಸಸ್‌ಪೆನ್‌ಷನ್‌ನಲ್ಲಿ ಇಟ್ಟು, ಉತ್ತರಕನ್ನಡ ಜಿಲ್ಲೆಗೆ ಅವನನ್ನು ಟ್ರಾನ್ಸ್‌ಫರ್ ಮಾಡಿರುವುದು ನಿಜವೇ ? ಈ ರೀತಿ ಆಪಾದನೆ ಮಾಡಿರತಕ್ಕಂಥವರನ್ನು ಅಲ್ಲೇ ಇಟ್ಟು, ಅದನ್ನು ತಡೆಯುವುದಕ್ಕೆ ಪ್ರಯತ್ನ ಪಟ್ಟಂಥ ವ್ಯಕ್ತಿಯನ್ನು ಬೇರೆ ಕಡೆಗೆ ಟ್ರಾನ್ಸ್‌ಫರ್ ಮಾಡಿರುವುದು ಸೂಕ್ತವೇ ? ಈ ಬಗ್ಗೆ ತಾವು ಏನು ಕ್ರಮ ತೆಗೆದುಕೊಳ್ಳುತ್ತೀರಿ ?

ಶ್ರೀ ಎಂ. ಮಲ್ಲಪ್ಪ.—ಈಗ ಸದ್ಯಕ್ಕೆ ಆ ಬಗ್ಗೆ ವಿವರಗಳು ನನ್ನ ಬಳಿಯಲ್ಲಿ ಇಲ್ಲ. ತಾವು ಹೇಳಿರತಕ್ಕಂಥಾದ್ದು ನಿಜವಾದರೆ ಆ ಬಗ್ಗೆ ನಾನು ಯೋಗ್ಯ ಕ್ರಮ ತೆಗೆದುಕೊಳ್ಳುತ್ತೇನೆ. ಇದನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ when the matter is seized of the Court and when it is under investigation it is better to wait for the final report. That is what I have to say.

SRI MALLUR ANANDA RAO.—May I know whether the Police registered a case in this matter ?

SRI M. MALLAPPA.—It has been regsitered. Unless the case is registered and FIR is submitted to the Court, I don't think further investigation is possible.

MATTERS UNDER RULE 312

(i) re : reconstitution of existing Advisory Council in Doddballapur

ಶ್ರೀ ಎಂ. ಚಂದ್ರಶೇಖರ್ (ಜಯನಗರ).—ಮಾನ್ಯ ಅಧ್ಯಕ್ಷರೇ, ಈ ದೊಡ್ಡಬಳ್ಳಾಪುರ ಪುರಸಭೆಯ ಸಲಹಾಸಮಿತಿಗಳನ್ನು ಇದುವರೆಗೂ ಅಲ್ಲಿ ಪುನರ್ ರಚನೆ ಮಾಡಿರಲಿಲ್ಲ. ಈಗ ಕೆಲವು ದಿವಸಗಳ ಹಿಂದೆ ಸಲಹಾ ಸಮಿತಿಯನ್ನು ಪುನರ್ರಚನೆ ಮಾಡಿದ್ದಾರೆ. ಇದರ ಬಗ್ಗೆ ಮಾನ್ಯ ಪೌರಾಡಳಿತ ಮಂತ್ರಿಯವರು ವಿವರಣೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

† ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಮಾನ್ಯ ಅಧ್ಯಕ್ಷರೇ, ೪-೫-೧೯೭೭ ರಲ್ಲಿ ಸರ್ಕಾರಿ ಆಜ್ಞೆಯ ಪ್ರಕಾರ ಸುಮಾರು ೨೩ ಮಂದಿಯನ್ನು ದೊಡ್ಡಬಳ್ಳಾಪುರ ಪುರಸಭೆಯ ಆಡ್ವೈಸರಿ ಕಮಿಟಿಗೆ ನೇಮಕ ಮಾಡಲಾಗಿತ್ತು. ಇದಾದಮೇಲೆ ಪುನಃ ೧೦-೭-೧೯೭೮ ರಲ್ಲಿ ೨೩ ಜನ ಸದಸ್ಯರಿದ್ದ ಸಲಹಾ ಸಮಿತಿಯನ್ನು ವಜಾ ಮಾಡಿ ೧೫ ಜನರನ್ನು ಹೊಸದಾಗಿ ಸಲಹಾ ಸಮಿತಿಗೆ ನೇಮಕ ಮಾಡಲಾಯಿತು. ಇದರಲ್ಲಿ ಪಿ. ವೆಂಕಟರಾಯಪ್ಪ, ಬಿ. ಆರಸಪ್ಪ, ಎಂ. ಪಿ. ರಾಮಯ್ಯ, ಲಕ್ಷ್ಮಣಯ್ಯ, ರಾಮೇಗೌಡ, ರಂಗಲಕ್ಷ್ಮಿ, ಎಸ್. ಕೃಷ್ಣಕುಮಾರ್ ಅಬ್ದುಲ್ ರಹಮಾನ್ ಇವರುಗಳು ಮೀಟಿಂಗ್‌ಗೆ ಹಾಜರಾಗಲಿಲ್ಲ. ಹೆಚ್ಚು ಕಡಿಮೆ ಒಂದು ಮೀಟಿಂಗ್‌ಗೂ ಹೋಗಿಲ್ಲ. ಇದನ್ನು ಮೊದಲು ರಚನೆ ಮಾಡಿದಾಗಿನಿಂದಲೂ ಎಷ್ಟೋ ಮೀಟಿಂಗ್‌ಗಳು ಆಗಿವೆ. ಆದರೆ ಒಂದು ಸಭೆಯಲ್ಲೂ ಭಾಗವಹಿಸಿಲ್ಲ. ೧೨ ಜನವೂ ಒಂದು ಸಭೆಗೂ ಹೋಗಿಲ್ಲ. ಶ್ರೀಯುತರಾದ ಅಬ್ದುಲ್ ರಹೀಮ್, ಎಂ. ಪಿ. ರಾಮಯ್ಯ, ಪಿ. ವೆಂಕಟರಮಣಯ್ಯ, ಎಸ್. ಕೃಷ್ಣಕುಮಾರ್ ಮುಂತಾದವರೆಲ್ಲರೂ ಸಹ ಲೂಮ್ಸ್‌ಗಳನ್ನು ಇಟ್ಟಿರತಕ್ಕಂಥ ವರ್ತಕರೆಂದು ಗೊತ್ತಾಯಿತು. ನಮ್ಮ ಅಧಿಕಾರಿಗಳನ್ನು ಅಲ್ಲಿಗೆ ಕಳುಹಿಸಿ ಅಲ್ಲಿ ಅಧಿಕಾರಿಗಳು ವಿಚಾರಣೆ ಮಾಡಿದಾಗ ಇವರೆಲ್ಲರೂ ಸಹ ಆಕ್ಟ್ಯುಯಿಯನ್ನು ಕದಿಯುವುದಕ್ಕೆ ಪ್ರಯತ್ನ ಮಾಡಿದರು ಎನ್ನುವ ವರದಿ ಬಂದಿದ್ದರಿಂದ ಅವರನ್ನು ತೆಗೆದಿದ್ದೇನೆ. ಬೇರೆ ಯಾವ ರಾಜಕೀಯ ದುರುದ್ದೇಶದಿಂದ ಮಾಡಿಲ್ಲ. ೨೩ ಮಂದಿ ಸದಸ್ಯರಿರುವ ಸಲಹಾ ಮಂಡಲಿಯಲ್ಲಿ ಈ ೧೦-೧೨ ಜನ ಒಂದು ಸಭೆಗೂ ಹೋಗಿಲ್ಲ. ಆದ್ದರಿಂದ ಸರ್ಕಾರ ಈ ೧೫ ಜನರನ್ನು ನೇಮಕ ಮಾಡಿತು.

ಶ್ರೀ ಎಂ. ಚಂದ್ರಶೇಖರ್.—ಇವತ್ತಿನ ದಿವಸ ಪ್ರಜಾವಾಣಿ ಪತ್ರಿಕೆಯಲ್ಲಿ ನೋಡಿದರೆ ಅರ್ಥವಾಗುತ್ತದೆ. ಇದರಲ್ಲಿ ರಾಜಕೀಯ ದುರುದ್ದೇಶ ಇಲ್ಲ ಎಂದು ಹೇಳಿದಾಗ ಹಿಂದೆ ಯಾರ್ಯಾರು ಪದಾಧಿಕಾರಿಗಳಾಗಿ ಕೆಲಸ ಮಾಡುತ್ತಿದ್ದರೋ ಆ ಜನವನ್ನು ಬಿಟ್ಟು ಮೊನ್ನೆ ಮುನಿಸಿಪಲ್ ಚುನಾವಣೆಯಲ್ಲಿ ಅಭ್ಯರ್ಥಿಗಳಾಗಿ ನಿಂತಿದ್ದಂತಹ ಕಾಂಗ್ರೆಸ್ (ಐ) ಜನರನ್ನು ೧೫ ಜನರು ಕಾಂಗ್ರೆಸ್ (ಐ) ನವರನ್ನು ಅಲ್ಲಿ ಸಲಹಾ ಸಮಿತಿಯಲ್ಲಿ ಕಾಣಿಕ್ಕಿದ್ದೀರಿ ಇದು ರಾಜಕೀಯ ದುರುದ್ದೇಶ ಅಲ್ಲವೇ? ಮತ್ತೆ ಮೊನ್ನೆ ತಾವು ತಮ್ಮ ಇಲಾಖೆಯ ಬೇಡಿಕೆಯ ಮೇಲೆ ಉತ್ತರ ಕೊಡುವಾಗ ಈಗ ಇರುವ ಸಲಹಾ ಸಮಿತಿಯನ್ನು ಬದಲಾಯಿಸುವುದಿಲ್ಲ ಎಂಬುದಾಗಿ ಹೇಳಿದ್ದೀರಿ. ಒಂದು ಪಕ್ಷ ಆ ರೀತಿ ಪುನರ್‌ರಚನೆ ಮಾಡುವಾಗ ಎಲ್ಲಾ ವರ್ಗದವರಿಗೂ ಆ ಪುರಸಭೆಗಳಲ್ಲಿ ಅವಕಾಶ ಮಾಡಿಕೊಡಲಾಗುತ್ತದೆ ಎಂಬುದಾಗಿ ತಾವು ಹೇಳಿದ್ದೀರಿ. ಮಾನ್ಯ ಆಹಾರ ಮತ್ತು ಅರಣ್ಯ ಇಲಾಖೆಯ ಸಚಿವರೂ ಇದ್ದಾರೆ ಅವರು ತಮ್ಮ ಅರಣ್ಯ ಇಲಾಖೆಯ ನಾಗರಹೊಳೆ ದುರಂತದ ಬಗ್ಗೆ ಉತ್ತರ ಹೇಳುತ್ತಾ ಒಂದು ಮಾತನ್ನು ಹೇಳಿದರು. ಪುರಸಭೆಯ ಸಹಾಯವನ್ನು ತೆಗೆದುಕೊಂಡಿದ್ದರೆ ತಮಗೆ ೨೦ ಸಾವಿರ ಹೆಚ್ಚಿಗೆ ಮತ ಬರಬೇಕಾಗಿತ್ತು, ಆದರೆ ಆ ನಗರದಲ್ಲಿರತಕ್ಕಂಥ ಆ ಜನ ನನ್ನ ವಿರುದ್ಧವಾಗಿ ಕೆಲಸ ಮಾಡಿದರು ಅದರಿಂದ ಕಡಿಮೆ ಅಂತರದಿಂದ ಗೆದ್ದಿದ್ದೇನೆ ಎಂಬುದಾಗಿ ಹೇಳಿದರು. ಆ ವಿಷಯವನ್ನು ಗಣನೆಗೆ ತೆಗೆದುಕೊಳ್ಳುವುದಾದರೆ ಆ ಒಂದು ಉದ್ದೇಶದಿಂದ ಆ ನಗರದಲ್ಲಿ ಕಾಂಗ್ರೆಸ್ (ಐ)ಗೆ ವಿರೋಧವಾಗಿರುವಂತಹವರೇ ಹೆಚ್ಚು ಜನ ಇದ್ದಾರೆ. ಆದರಿಂದ ಇವರು ಆ ಸಲಹಾ ಸಮಿತಿಯನ್ನು ಪುನರ್‌ರಚನೆ ಮಾಡಿದ್ದಾರೆಂದು ಅರ್ಥವಾಗುತ್ತದೆ. ಎರಡನೆಯದಾಗಿ ೨೩ ಜನ ಇರುವ ಸಲಹಾ ಸಮಿತಿಯನ್ನು ಪುನರ್‌ರಚನೆ ಮಾಡಿ ಅದರಲ್ಲಿ ೧೫ ಜನರನ್ನು ಮಾತ್ರ ನಾಮಕರಣ ಮಾಡಿದ್ದೀರಿ: ಅಂತಹ ಒಂದು ಸಮಿತಿಯು ಯಾವ ರೀತಿಯ ಸಲಹೆಯನ್ನು ಕೊಡುವುದಕ್ಕೆ ಅವಕಾಶವಾಗುತ್ತದೆ? ಅಧಿಕಾರಿಗಳು ಮುಖ್ಯವಾಗಿ ರಾಜಕೀಯ ಪಕ್ಷದವರು ಹಾಗೂ ಮಂತ್ರಿಗಳು ಯಾರ್ಯಾರು ಯಾವ ಯಾವ ತಾಲ್ಲೂಕಿನಲ್ಲಿರುತ್ತಾರೋ ಅಲ್ಲಿ ವಾಸ್ತವ್ಯೇಪ ಮಾಡುತ್ತಾರೆ. ಸೊಸೈಟಿಯಲ್ಲಿ ಇವರಿಗೆ ಬೇಕಾದವರನು ನಾಮಕರಣ ಮಾಡಿದ್ದಾರೆ. ಅಧ್ಯಕ್ಷರು, ಕಾರ್ಯದರ್ಶಿಗಳು, ಖಜಾಂಚಿ ಹಾಗೂ ಸದಸ್ಯರು ಎಂಬುದಾಗಿ ತಾಲ್ಲೂಕು ಸಮಿತಿ ಇದ್ದ ಹಾಗೆ ಇದೆ. ಆ ರೀತಿ ಇರುವ ಮುನಿಸಿಪಲ್ ಸಲಹಾ ಸಮಿತಿ ಯಾವ ರೀತಿ ಸಲಹೆ ಮಾಡಬೇಕು? ಮುಖ್ಯವಾಗಿ ದೊಡ್ಡಬಳ್ಳಾಪುರ ನಗರದಲ್ಲಿ ಕಾಂಗ್ರೆಸ್ (ಐ)ಗೆ ವಿರುದ್ಧವಾಗಿರುವ ಶಕ್ತಿಗಳು ಹೆಚ್ಚಿಗೆ ಇರುವಾಗ, ಮತ್ತು ಜನತೆಯ ಮತವನ್ನು ಪ್ರತಿಬಿಂಬಿಸುವಂತಹ ಸಲಹಾ ಸಮಿತಿಯನ್ನು ಮಾಡದೇ ಇದ್ದರೇ ಏನು ಪ್ರಯೋಜನ? ಇಂತಹವುಗಳನ್ನು ರಾಜಕೀಯ ದುರುದ್ದೇಶದಿಂದ ಮಾಡದೆ, ಆಡಳಿತ ಪಕ್ಷದ ಸದಸ್ಯರಿಗೆ ಕೊಡದೇ ಎಲ್ಲ ಪಕ್ಷದವರಿಗೂ ಮಾನ್ಯತೆ ಕೊಡಬೇಕೆಂದು ಹಾಗೂ ಈಗ ಪುನರ್‌ರಚನೆ ಮಾಡಿರುವಂತಹ ಸಲಹಾ ಸಮಿತಿಯನ್ನು ರದ್ದು ಮಾಡಬೇಕೆಂದು ಒತ್ತಾಯ ಪೂರ್ವಕವಾಗಿ ನಾನು ಹೇಳುತ್ತೇನೆ.

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಇನ್ನೂ ಕೆಲವು ಸದಸ್ಯರುಗಳನ್ನು ಹಾಕುವುದಕ್ಕೆ ನನ್ನ ಅಭ್ಯಂತರ ಇಲ್ಲ. ನಿಮ್ಮಿಂದಲೂ ತೆಗೆದುಕೊಂಡು ಹಾಕೋಣ. ಆದರೆ ವಿರೋಧ ಪಕ್ಷಕ್ಕೂ ಹಾಗೂ ಚುನಾವಣೆ ಮಾಡಿದ್ದಕ್ಕೂ ಸಂಬಂಧವಿಲ್ಲ ಅಥವಾ ಈಗ ಏನು ನೇಮಕ ಮಾಡಿರುವಂತಹ ಸದಸ್ಯರುಗಳು ಮುನಿಸಿಪಲ್ ಚುನಾವಣೆಗೆ ನಿಂತುಕೊಂಡಿದ್ದಾರೆಂಬುದೂ ನನಗೆ ಗೊತ್ತಿರಲಿಲ್ಲ.

ಶ್ರೀ ಎಂ. ಚಂದ್ರಶೇಖರ್.—ಮುಂದಕ್ಕೂ ಕೂಡ ಮುನಿಸಿಪಲ್ ಚುನಾವಣೆಗೆ ನಿಂತುಕೊಳ್ಳ ತಕ್ಕಂಥ ಅಭ್ಯರ್ಥಿಗಳನ್ನು ನೇಮಕ ಮಾಡತಕ್ಕಂಥ ಉದ್ದೇಶ ನಿಮಗೆ ಇದೆ ಎಂಬುದಾಗಿ ಅರ್ಥವಾಗುತ್ತೆ. ಏಕೆಂದರೆ ನೀವು ಈಗ ಇರತಕ್ಕಂಥ ಸಲಹಾ ಮಂಡಲಿಗಳನ್ನು ಬದಲಾಯಿಸುವುದಿಲ್ಲ ಎಂಬುದಾಗಿ ಹೇಳಿದ್ದು ೮ನೇ ತಾರೀಖು. ಆದರೆ ೧೦ನೇ ತಾರೀಖು ಬದಲಾವಣೆ ಮಾಡಿದ್ದೀರಿ.

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಸರ್ಕಾರ ಆರ್ಡರ್ ಮಾಡಿ ೨ ತಿಂಗಳಾಗಿದೆ. ನಿಮ್ಮ ಕಡೆಯ ಕೆಲವು ಮಂದಿಯನ್ನು ಬೇಕಾದರೂ ಹಾಕೋಣ. ಆದರೆ ಆ ರೀತಿ ಹಾಕಿದಂತಹ ಮಹನೀಯರು ಒಂದು ಸಭೆಗೂ ಹೋಗೋಲ್ಲ ಸಭೆಗೆ ಹೋಗದಿದ್ದರೆ ಹೇಗೆ? ಅಲ್ಲಿಯ ಮಂತ್ರಿಗಳು ಹೇಳಿದ್ದರಿಂದ ಹಸ್ತಕ್ಷೇಪ ಮಾಡಿದ್ದಾರೆ ಎಂಬುದಾಗಿ ಚಂದ್ರಶೇಖರ್‌ರವರು ಹೇಳಿದರು. ಅದು ಖಂಡಿತವಾಗಿಯೂ ಸರಿಯಲ್ಲ. ಆ ರೀತಿ ನೀವು ಮಾಡಿರಬಹುದು. ನಾವು ಯಾರು ಮಾಡಿದ್ದಿಲ್ಲ. ನನ್ನ ಕ್ಷೇತ್ರದಲ್ಲಿ, ನನ್ನ ಜಿಲ್ಲೆಯೊಳಗೆ ಗೌರ್ನರ್ ಆಡಳಿತ ಬಂದಿದ್ದಾಗ ಒಬ್ಬ ಅಧಿಕಾರಿಯನ್ನೂ ಅಂದರೆ ತಹಸೀಲ್ದಾರ್‌ರಿಂದ ರೆವಿನ್ಯೂ ಇನ್ಸ್‌ಪೆಕ್ಟರ್‌ವರೆಗೂ ಬಿಡಲಿಲ್ಲ. ಅಧಿಕಾರಿಗಳಿಂದ ಸಹಾಯವನ್ನು ತೆಗೆದುಕೊಂಡರೆ ಓಟು ಬರುತ್ತವೆಂಬ ಭಾವನೆ ತಪ್ಪು. ಕಳೆದ ಚುನಾವಣೆಯಲ್ಲಿ ನಮಗೆ ವಿರುದ್ಧವಾದ ಅಧಿಕಾರಿಗಳನ್ನೇ ಹಾಕಿದರು. ಆ ತಹಸೀಲ್ದಾರ್‌ರವರು ನಮ್ಮ ಕಡೆಯವರ ಒಂದೇ ಒಂದು ಮಾತನ್ನೂ ಕೇಳಲಿಲ್ಲ. ಟಿ.ಬಿ.ಯಲ್ಲಿ ಜಾಗ ಕೊಡಬೇಡಿ ಎಂಬುದಾಗಿ ಮಾಡಿದರು. ನಾವು ೬ ವರ್ಷಗಳಲ್ಲಿ ಮಾಡಿದ್ದುದನ್ನು ೨ ತಿಂಗಳಲ್ಲೇ ಮಾಡಿದಿರಿ. ಅದರ ಫಲಿತಾಂಶ ಬೇರೆಯಾಯಿತು. ಆದ್ದರಿಂದ ಅಧಿಕಾರಿಗಳನ್ನು ನೆಚ್ಚಿ ಯಾರೂ ಚುನಾವಣೆ ಮಾಡಬೇಕಾಗಿಲ್ಲ. ಇದಕ್ಕೆ ಶ್ರೀಮಾನ್ ರಾಮೇಗೌಡರ ಹಸ್ತಕ್ಷೇಪವೂ ಇಲ್ಲ. ನನ್ನ ಹಸ್ತಕ್ಷೇಪವೂ ಇಲ್ಲ. ನಿಮ್ಮ ಕಡೆಯವರ ಪಟ್ಟಿಯನ್ನು ಕೂಡಿ ಹಾಕೋಣ.

ಶ್ರೀ ಜಿ. ರಾಮೆ ಗೌಡ — ಮಾನ್ಯ ಸದಸ್ಯರು ನನ್ನ ಹೆಸರನ್ನು ಹೇಳಿದ್ದರಿಂದ ಅದಕ್ಕೆ ನಾನು ಉತ್ತರ ಕೊಡಬೇಕಾಗಿದೆ. ಈಗ ಎದ್ದು ನಿಂತಿರುವವರು ಅರಣ್ಯ ಖಾತೆಯ ಮಂತ್ರಿ. ಇದರಲ್ಲಿ ನಾನು ನಾಗರ ಹೊಳೆಯ ದುರಂತದಲ್ಲಿ ಉತ್ತರ ಹೇಳುವಾಗ ಹೇಳಿದ್ದಂತಹ ವ್ಯಕ್ತಿ ಇಲ್ಲಿ ಇಲ್ಲ. ಅಂದರೆ ಸರ್ಕಾರ ನಾಮಕರಣ ಮಾಡಿರತಕ್ಕಂಥ ಸಲಹಾ ಸಮಿತಿಯಲ್ಲಿ ಇಲ್ಲ. ಆದ್ದರಿಂದ ಅದಕ್ಕೂ ಇದಕ್ಕೂ ಸಂಬಂಧ ಇಲ್ಲ. ರಾಜಕೀಯ ಮಾಡಿದ್ದಾರೆಂದು ಮಾನ್ಯ ಸದಸ್ಯರು ಹೇಳಿದ್ದಾರೆ. ನಾನು ಚುನಾವಣೆಗೆ ಅರ್ಜಿ ಹಾಕಿದಾಗ ೧೯ ಜನ ಅಧಿಕಾರಿಗಳನ್ನು ಗಡಿ ಪಾರು ಮಾಡಿದರು. ಅಂದರೆ ಚುನಾವಣೆ ಮುಗಿಯುವ ವರೆಗೂ ತಾಲ್ಲೂಕಿನ ಒಳಗೆ ಬರಕೂಡದು ಎಂಬುದಾಗಿ ಮಾಡಿದರು. ೫ ಜನ ಅಧಿಕಾರಿಗಳನ್ನು ಅಲ್ಲಿಂದ ವರ್ಗ ಮಾಡಿದರು. ಏಕೆಂದರೆ ಅಧಿಕಾರಿಗಳ ಸಹಾಯವನ್ನು ತೆಗೆದುಕೊಂಡು ಬಿಡುತ್ತಾರೆಂದು ಮಾಡಿರುತ್ತಾರೆಂದು, ಇದು ರಾಜಕೀಯವೋ ಏನು? ಇದು ನಿಮ್ಮ ಪಕ್ಷದವರಿಂದಲೇ ಆಗಿರುವಂತಾದ್ದು ಏಕೆಂದರೆ ರಾಜ್ಯಪಾಲರಿಗೆ ಆ ಅಧಿಕಾರಿಗಳ ಹೆಸರು ಹೇಗೆ ಗೊತ್ತು? ಅವರ ಹೆಸರುಗಳನ್ನು ಕೊಟ್ಟಿರುವವರು ನೀವೇ ಎಂಬುದು ನನ್ನ ಅಭಿಪ್ರಾಯ. ಆದರೆ ನಾವು ಆ ಕೆಲಸವನ್ನು ಮಾಡುವುದಕ್ಕೆ ಹೋಗಲಿಲ್ಲ.

SRI M. V. RAJASEKHARAN.—I am on a Point of Order. It is very unfortunate the Minister has brought in the name of the Governor on the floor of the House. It is wrong.

SRI AZEEZ SAIT.—Let us not try to twist.

ಶ್ರೀ ಜಿ. ರಾಮೇಗೌಡ.—ನೀವು ಅರಣ್ಯ ಖಾತೆಯ ಮಂತ್ರಿ ಎಂದು ಹೇಳಬಹುದು. ನಾವು ಹೇಳಬಾರದಾ?

ಶ್ರೀ ಮಳ್ಳೂರು ಆನಂದರಾವ್.—ಮಾನ್ಯ ರಾಮೇಗೌಡರು ಮಂತ್ರಿಗಳು. ಜವಾಬ್ದಾರಿಯುತ ವಾದ ಸ್ಥಾನದಲ್ಲಿರುವಂತಹವರು, ಆದರೆ ಅವರು ಮಾಡಿರತಕ್ಕಂಥ ಅಪಾಧನೆ ನಮ್ಮ ಕಡೆ ಕೈ ತೋರಿಸಿ ಹೇಳಿದಾರೆ.

ಶ್ರೀ ಜಿ. ರಾಮೇಗೌಡ.—ಮಂತ್ರಿಗಳು ತಮ್ಮ ಪ್ರಭಾವ ಬೀರಿದ್ದಾರೆಂದು ಹೇಳಿದರು. ನಾವು ಯಾರೂ ಪ್ರಭಾವ ಬೀರಿಲ್ಲ ಎಂಬುದಾಗಿ ಹೇಳುತ್ತೇನೆ.

ಶ್ರೀ ಮಳ್ಳೂರು ಆನಂದರಾವ್.—ಮಂತ್ರಿಗಳು ಜವಾಬ್ದಾರಿಯುತವಾಗಿ ಮಾತನಾಡಬೇಕು.

ಶ್ರೀ ಜಿ. ರಾಮೇಗೌಡ.—ನಿಮಗೆ ಎಷ್ಟು ಗೌರವ ಇದೆಯೋ ಅಷ್ಟೇ ಗೌರವ ನನಗೂ ಇದೆ. ಜಾಸ್ತಿ ಇಲ್ಲ.

ಶ್ರೀ ಮಳ್ಳೂರು ಆನಂದರಾವ್.—ನೀವು ಮಾಡಿಸಿದ್ದೀರಿ ಅಂದರೆ ಏನು ಅರ್ಥ ? ನಮ್ಮ ಜನತಾ ಪಾರ್ಟಿ ಯವರು ಮಾಡಿಸಿದ್ದಾರೆಂದು ಅರ್ಥವೇ?

ಅಧ್ಯಕ್ಷರು.—ರೆಕಾರ್ಡ್ ತರಿಸಿ ನೋಡುತ್ತೇನೆ.

ಶ್ರೀ ಮಳ್ಳೂರು ಆನಂದರಾವ್.—ಮಾನ್ಯ ರಾವೆ ಗೌಡರು ಹೇಳಿದರು. ಅವರು ನಾಮಿನೇಷನ್ ಫೈಲ್ ಮಾಡಿದ ತಕ್ಷಣ ೧೫–೨೦ ಜನ ಅಧಿಕಾರಿಗಳನ್ನು ಗಡಿ ಪಾರು ಮಾಡಿಸಿದರು ಎಂದು. ಮತ್ತು ನೀವೇ ಹೇಳಿ ಮಾಡಿಸಿದ್ದು ಎಂದು ಹೇಳಿದರು. ಇವರು ನಾಮಿನೇಷನ್ ಫೈಲ್ ಮಾಡಿದಾಗ ಯಾರ ಆಡಳಿತ ಇತ್ತು ಎಂದು ನಾನು ಅವರನ್ನು ಕೇಳಬಯಸುತ್ತೇನೆ.

೧-೦೦ ಪಿ.ಎಂ.

ಶ್ರೀ ಜಿ. ರಾಮೇಗೌಡ.—ನಾವು ಪ್ರಭಾವ ಬೀರಿದ್ದೇವೆಂದು ಅವರು ಹೇಳುವುದಾದರೆ ಅವರೂ ಸಹ ಬೀರಿದ್ದಾರೆಂದು ಅರ್ಥ. ಅವರು ಪ್ರಭಾವ ಬೀರದಿದ್ದರೆ ನಮ್ಮದೂ ಇಲ್ಲ ಎಂದು ಅರ್ಥ,

ಅಧ್ಯಕ್ಷರು.—ಈಗ ಯಾರು ಯಾರನ್ನೂ ಅಪಾದನೆ ಮಾಡುವುದು ಬೇಡ. ಆಗಿರುವ ವಿಷಯವನ್ನು ಇಲ್ಲಿ ಪ್ರಸ್ತಾಪ ಮಾಡುವುದು ಬೇಡ, ತಾವು ಕುಳಿತುಕೊಳ್ಳಿ. ಗಾಳಿಯನ್ನು ಗುದ್ದಿ ಮೈ ನೋಯಿಸಿಕೊಳ್ಳುವುದು ಬೇಡ.

ಶ್ರೀ ಬಿ. ಎನ್. ಬಾಜೇಗೌಡ.—ಡಿಸೆಂಬರ್ ತಿಂಗಳಲ್ಲಿ ಚುನಾವಣೆ ನಡೆಯುವುದರಿಂದ ಅಲ್ಲಿಯವರೆಗೆ ಸಲಹಾ ಸಮಿತಿಗಳನ್ನು ನೇಮಕ ಮಾಡುವುದಿಲ್ಲವೆಂದು ಮಾನ್ಯ ಮಂತ್ರಿಗಳು ಈ ಮೊದಲು ಆಶ್ವಾಸನೆ ಕೊಟ್ಟಿದ್ದರು. ಆದರೆ ಈಗ ಆತುರವಾಗಿ ಮಾಡಿದ್ದಾರೆ. ದೊಡ್ಡಬಳ್ಳಾಪುರದಲ್ಲಿ ಮಾಡಿರುವ ಬಗ್ಗೆ ಪತ್ರಿಕೆಯಲ್ಲಿ ಬಂದಿದೆ. ಇವರೆಲ್ಲರೂ ಒಂದೇ ಪಕ್ಷದವರಾಗಿದ್ದಾರೆ. ಮಾನ್ಯ ಚಂದ್ರಶೇಖರ್ ಅವರು ಹೇಳಿದಂತೆ ಇದು ರಾಜಕೀಯ ಉದ್ದೇಶದಿಂದ ಕೂಡಿದ್ದಾಗಿದೆ. ಆದಕಾರಣ ಇದನ್ನು ರದ್ದು ಮಾಡಿ ಜನತಾ ಪಕ್ಷದವರೂ ಸಹ ಇರುವಂತಹ ಸಲಹಾ ಸಮಿತಿಯನ್ನು ನೇಮಕ ಮಾಡುತ್ತೇವೆನ್ನುವ ಭರವಸೆಯನ್ನು ಕೊಡುತ್ತೀರಾ?

ಶ್ರೀ ಜಿ. ರಾಮೇಗೌಡ.—ಈಗ ಸಲಹಾ ಸಮಿತಿಯಲ್ಲಿರುವವರು ಜನತಾ ಅಭ್ಯರ್ಥಿಯ ಪರವಾಗಿ ಪೂಲಿಂಗ್‌ಭೂತೆ ಏಜೆಂಟರಾಗಿದ್ದರೆಂಬುದನ್ನು ನಾನು ಬೇಕಾದರೆ ರುಜುವಾತು ಮಾಡಿಸುತ್ತೇನೆ.

ಶ್ರೀ ಎಂ. ಚಂದ್ರಶೇಖರ್.—ಈ ಮೊದಲು ಜನತಾ ಪಕ್ಷದಲ್ಲಿದ್ದವರು ಈಗ ಕಾಂಗ್ರೆಸ್ (ಐ) ಪಕ್ಷಕ್ಕೆ ಹೋಗಿದ್ದಾರೆ. ಅಂತಹವರನ್ನು ನೇಮಕ ಮಾಡಿದ್ದು ನಿಮ್ಮ ತಪ್ಪು.

ಶ್ರೀ ಬಿ. ವಿ. ರಾಮಚಂದ್ರರೆಡ್ಡಿ.—ಮಾರಿ ಕಣ್ಣು ಹೋತನ ಮೇಲೆ ಎಂಬಂತೆ ಮಾನ್ಯ ಪೌರಾಡಳಿತ ಸಚಿವರು ದೊಡ್ಡಬಳ್ಳಾಪುರದಲ್ಲಿ ಮಾಡಿರುವಂತೆ ನನ್ನ ಕ್ಷೇತ್ರದಲ್ಲಿಯೂ ಸಹ ಸ್ಯಾನಿಟರಿ ಬೋರ್ಡಿಗೆ ಸಲಹಾ ಸಮಿತಿಯನ್ನು ನೇಮಕ ಮಾಡುವುದಕ್ಕೆ ಹೊರಟಿದ್ದಾರೆ. ಈ ಮೊದಲು ಮಾಡುವುದಿಲ್ಲವೆಂದು ಸ್ಟೇಟ್‌ಮೆಂಟ್ ಮಾಡಿದ್ದರು. ಆದರೆ ಈಗ ಬೆಂಗಳೂರು ಜಿಲ್ಲೆಯಲ್ಲಿಯೂ ಕೈ ಹಾಕುವುದಕ್ಕೆ ಹೊರಟಿದ್ದಾರೆ. ಇದು ಸರಿಯಲ್ಲ. ಚುನಾವಣೆ ನಡೆಯುವವರೆಗೆ ಅಡ್ಮಿನಿಸ್ಟ್ರೇಟರ್ ಅವರೇ ಅಧಿಕಾರ ನಡೆಸಿಕೊಂಡು ಹೋಗಲಿ. ಚುನಾವಣೆಯನ್ನು ಮಾತ್ರ ಜಾಗ್ರತೆ ಮಾಡಬೇಕೆಂದು ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಚ್. ಸಿ, ಶ್ರೀಕಂಠಯ್ಯ.--ಚುನಾವಣೆಯನ್ನು ಯಾವಾಗ ಮಾಡಲಾಗುತ್ತದೆಂಬುದನ್ನು ಈಗಾಗಲೇ ಹೇಳಿದ್ದೇನೆ. ಚುನಾವಣೆ ನಡೆಯುವುದು ದೂರವಾದಾಗ ಅಲ್ಲಿಯ ಅಭಿವೃದ್ಧಿ ಕಾರ್ಯಗಳು ಕುಂಠಿತವಾಗಬಾರದೆಂಬ ಕಾರಣದಿಂದ ಈ ರೀತಿ ಸಲಹಾ ಸಮಿತಿಗಳನ್ನು ನೇಮಕ ಮಾಡಲಾಗುತ್ತಿದೆ. ಇಂತಹ ಸಮಿತಿಗಳನ್ನು ನೇಮಕ ಮಾಡುವಾಗ ಅವರನ್ನು ಸಹ ನಾನು ಕೇಳಿ, ಅವರ ಅಭಿಪ್ರಾಯವನ್ನು ಸಹ ಸಂಗ್ರಹಣೆ ಮಾಡಿ ನಂತರ ಮಾಡುತ್ತೇನೆ.

(*ii*) *re : Spread of cholera in Doddaballapur, Hoskote and in Bellary District.*

SR B. N. BACHE GOWDA (Hosakote).—Sir. I wish to raise a matter under Rule 312 regarding the spread of Cholera in Doddaballapur, Hoskote and Bellary District.

MR. SPEAKER.—This matter will be treated as a Calling Attention and the Hon. Minister for Health will make a statement.

SRI M. MALLAPPA (Minister for Health).—Sir, I wish to make the following statement :—

Gastro-enterties cases mostly seasonal especially during the summer season when there is shortage of water supply.

The problem is more in the Cities, Municipalities and other Urban areas, Industrial Towns, Project areas etc., where there is concentrated floating papulation. The mode of spread is through contaminated water and food. Insanitary conditions fly nuisance. unprotected contaminated water are the main causes for the spread of the disease. Predisposing causes favouring the spread, are lowered resistance and gastric upset. This is one of the preventable diseases, Local bodies such as Corporations/Municipalities/Taluka Boards etc., have to maintain satisfactory sanitation, providing adequate and wholesome protected water supply and ensuring sanitation in Hotels/Tea Shops etc., It is necessary to stock adequate quantity of Bleeching Powder and periodically disinfect rural water supplies.

The Department of Health and Family Welfare Services will assist the health sections of these Local Self Government bodies namely Corporations and Municipalities etc., in the task of controlling the disease, treat the cases and help in their measures to prevent recurrence.

There is vomiting and Diarrohea in these cases and they have to be treated without delay to prevent complications and mortality. In order to combat the fluid loss and salts on account of vomiting, oral electrolite powder containing salts is available and stocked in all the Institutions to treat the cases. In addition, as a precautionery measure, anticipatory innoculations, in vulnerable areas especially in the river side villages is taken up before the Cholera season and Health Education is intensified.